ಆ) ಇದರಲ್ಲಿ ಅರಕಲಗೂಡು ಮತಕ್ಷೇತ್ರಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) 2005–06 ರಿಂದ ಫೆಬ್ರವರಿ 2010ರವರೆಗೆ ಬಿಡುಗಡೆಯಾದ ಹಣ;

The Amount released from 2005-06 to February 2010;

ಕೇಂದ್ರ ಸರ್ಕಾರ	ರೂ.1621.57
ರಾಜ್ಯ ಸರ್ಕಾರ	ರೂ.195.77
ಒಟ್ಟು :	**ರೂ.1817.34**

ಆ) ರೂ. 185.61 ಲಕ್ಷ.
Rs. 185.61 lakhs.

ಸರ್ಕಾರೇತರ ಸಂಘ ಸಂಸ್ಥೆಗಳು

529 (770) ಶ್ರೀ ಹೆಚ್.ಪಿ. ಮಂಜುನಾಥ್ (ಹುಣಸೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನಲ್ಲಿರುವ ಸರ್ಕಾರೇತರ ಸಂಘ ಸಂಸ್ಥೆಗಳ ಮತ್ತು ಸಹಕಾರ ಸಂಘಗಳ ಸಂಖ್ಯೆ ಎಷ್ಟು? (ಅವುಗಳ ಹೆಸರು, ವಿಳಾಸ ಮತ್ತು ಸಂಸ್ಥೆಯ ಮುಖ್ಯ ಕಾರ್ಯಚಟುವಟಿಕೆ ಬಗ್ಗೆ ವಿವರ ನೀಡುವುದು);

ಆ) ಈ ಸಹಕಾರ ಸಂಘಗಳ ಹಾಗೂ ಸಂಸ್ಥೆಗಳ ಕಾರ್ಯದಲ್ಲಿ ಯಾವುದಾದರೊಂದು ಸಹಕಾರಿ ಸಂಘ ಅಥವಾ ಸಂಘ ಸಂಸ್ಥೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವ ಬಗ್ಗೆ ಖಾತರಿಪಡಿಸಲು ನಿಗದಿ ಪಡಿಸಿರುವ ಮಾನದಂಡಗಳು ಅಥವಾ ನಿಗದಿಪಡಿಸಿರುವ ನಿಯಮಗಳೇನು?

ಇ) ಸಂಘ ಸಂಸ್ಥೆಗಳ ಹಾಗೂ ಸಹಕಾರ ಸಂಘಗಳ ಕಾರ್ಯ ಚಟುವಟಿಕೆ ಮೇಲೆ ಇಲ್ಲಾವೆಯಿಂದ ನಿಯಂತ್ರಣವೇನಾದರೂ ಇರುವುದೇ?

ಈ) ಮೇಲ್ಕಂಡವುಗಳ ಪೈಕಿ ಸಮರ್ಪಕವಾಗಿ ಕಾರ್ಯನಿರ್ವಹಿಸು ತ್ತಿರುವ ಸಂಘಗಳು ಎಷ್ಟು? ಅಸಮರ್ಪಕವಾಗಿ ನಡೆಯುತ್ತಿರುವುದು ಎಷ್ಟು ಮತ್ತು ಯಾವುವು?

ಉ) ಪಟ್ಟಿಯಲ್ಲಿರುವ ಸಂಘ ಸಂಸ್ಥೆಗಳ ವಿರುದ್ಧ ದೂರು ಗಳೇನಾದರೂ ದಾಖಲಾಗಿರುವುದೇ ಅಥವಾ ತನಿಖೆ ನಡೆಯುತ್ತಿರುವುದೇ (ವಿವರ ನೀಡುವುದು)?

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು) :

ಅ) ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನಲ್ಲಿ ಒಟ್ಟು 462 ಸಂಘ ಸಂಸ್ಥೆಗಳು ನೊಂದಣಿಯಾಗಿರುತ್ತವೆ. ಸದರಿ ತಾಲ್ಲೂಕಿನಲ್ಲಿ 204 ಸಹಕಾರ ಸಂಘಗಳು ಬ್ಯಾಂಕುಗಳು ನೊಂದಣಿಯಾಗಿರುತ್ತವೆ.

ಆ) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ಅಡಿಯಲ್ಲಿ ನೊಂದಣಿ ಯಾದ ಸಹಕಾರ ಸಂಘಗಳು ಕಾಯ್ದೆ ಮತ್ತು ನಿಯಮಗಳಿಗೆ ಅನುಗುಣವಾಗಿ ರಚಿಸಿಕೊಂಡಿರುವ ಉಪವಿಧಿಗಳ ರೀತ್ಯಾ ಕೆಲಸ ನಿರ್ವಹಿಸ ಬೇಕಾಗಿರುತ್ತದೆ. ಮುಖ್ಯವಾಗಿ ಉಪವಿಧಿಗಳಲ್ಲಿ ತೋರಿಸಿರುವ ಧ್ಯೇಯೋದ್ದೇ ಶಗಳ ರೀತ್ಯಾ ಸದಸ್ಯರಿಗೆ ಸೇವೆ ನೀಡಬೇಕಾಗಿರುತ್ತದೆ.

ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಮತ್ತು ಕರ್ನಾಟಕ ಸಂಘಗಳ ನೋಂದಣಿ ನಿಯಮಗಳು 1961 ರ ರೀತ್ಯಾ ನೋಂದಣಿಯಾದ ಸಂಘ ಸಂಸ್ಥೆಗಳು ಕಾಯ್ದೆ ಮತ್ತು ನಿಯಮಗಳಿಗನು ಗುಣವಾಗಿ ಕೆಲಸ ನಿರ್ವಹಿಸಬೇಕಾಗಿರುತ್ತದೆ. ಹಾಗೆಯೇ ಪ್ರತಿಯೊಂದು ಸಂಘಕ್ಕೂ, ಒಂದು ಜ್ಞಾಪನಾ ಪತ್ರವನ್ನು ನೋಂದಣಿ ಮಾಡಿ ಕೊಡಲಾ ಗುತ್ತಿದ್ದು, ಅದರಲ್ಲಿ ನಮೂದಾಗಿರುವ ಧ್ಯೇಯೋದ್ದೇಶಗಳ ರೀತ್ಯಾ ಕೆಲಸ ನಿರ್ವಹಿಸಬೇಕಾಗಿರುತ್ತದೆ.

ಇ) ಸಂಘ ಸಂಸ್ಥೆಗಳು ಮತ್ತು ಸಹಕಾರ ಸಂಘಗಳು ತಮ್ಮ ಕಾರ್ಯ ಚಟುವಟಿಕೆಗಳನ್ನು ಕಾಯ್ದೆ ಮತ್ತು ನಿಯಮಗಳು ಹಾಗೂ ಅವುಗಳ ಉಪವಿಧಿಗಳ ರೀತ್ಯಾ ಕೆಲಸ ನಿರ್ವಹಿಸಬೇಕಾಗಿರುತ್ತದೆ. ಕಾಲಕಾಲಕ್ಕೆ ಸರ್ಕಾರ

ಮತ್ತು ನಿಯಂತ್ರಣಾಧಿಕಾರಿಗಳು ನಿಯಮಾನುಸಾರ ನೀಡುವ ನಿರ್ದೇಶನ ಗಳಂತೆ ಸಹ ಕೆಲಸ ಮಾಡಬೇಕಾಗಿರುತ್ತದೆ.

ಈ) ಮೇಲ್ಕಂಡ ಸಹಕಾರ ಸಂಘಗಳ ಪೈಕಿ 188 ಸಹಕಾರ ಸಂಘಗಳು ಕಾರ್ಯನಿರತವಾಗಿದ್ದು 09 ಸಹಕಾರ ಸಂಘಗಳು ಸಮಾಪನೆಯಲ್ಲಿ ಹಾಗೂ 07 ಸಹಕಾರ ಸಂಘಗಳು ನಿಷ್ಕ್ರೀಯವಾಗಿರುತ್ತವೆ. ತಾಲ್ಲೂಕಿನಲ್ಲಿ ವಾಸವಾಂಬ ಸಹಕಾರ ಸಂಘ, ಅಸ್ರ ಅಲ್ಪಸಂಖ್ಯಾತರ ಪತ್ತಿನ ಸಹಕಾರ ಸಂಘ, ಹಲವಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಹಾಳು ಉತ್ಪಾದಕರ ಸಹಕಾರ ಸಂಘಗಳು ಉತ್ತಮ ಹಾಗೂ ಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿವೆ.

ಸಂಘ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ರೀತ್ಯಾ ಆಡಿಟ್ ವರ್ಗೀಕರಣ ಹಾಗೂ ಲಾಭ– ನಷ್ಟ ವರ್ಗೀಕರಣವನ್ನು ಮಾಡಲು ಅವಕಾಶಗಳಿರುವುದಿಲ್ಲ. ಆದರೆ ಕಾಯ್ದೆ ಉಪಬಂಧಗಳ ರೀತ್ಯಾ ಪ್ರತಿ ವರ್ಷ ಮಹಾಸಭೆ ನಡೆಸುವುದು, ಲೆಕ್ಕ ಪತ್ರಗಳ ತಪಾಸಣೆ ಮಾಡಿಸಿ ಲೆಕ್ಕ ಪರಿಶೋಧನಾ ವರದಿಯೊಂದಿಗೆ ನೋಂದಣಾಧಿಕಾರಿಗಳ ಕಛೇರಿಗೆ ಸಲ್ಲಿಸಿ ನಿಗದಿತ ಶುಲ್ಕವನ್ನು ಸರ್ಕಾರಕ್ಕೆ ಪಾವತಿಸಿ, ಸ್ವೀಕೃತಿ ಪಡೆಯಬೇಕಾಗಿರುತ್ತದೆ. ಅದರಂತೆ ದಿನಾಂಕ: 01.06.2008 ರಿಂದ ಫೆಬ್ರವರಿ 2010 ರವರೆಗೆ 33 ಸಂಘ ಸಂಸ್ಥೆಗಳು ನೋಂದಣಾಧಿಕಾರಿಗಳ ಕಛೇರಿಗೆ ಸಲ್ಲಿಸಿ ಸ್ವೀಕೃತಿಯನ್ನು ಪಡೆದಿರುತ್ತವೆ.

ಉ) ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಲಭ್ಯವಾಗುವ ದೂರು ಅರ್ಜಿಗಳನ್ನು ವಿಚಾರಣೆ ಮಾಡಿ ಇತ್ಯರ್ಥ ಗೊಳಿಸಲಾಗುತ್ತಿದೆ. ಸಂಘ ಸಂಸ್ಥೆಗಳಿಗೆ ಸಂಬಂಧಿಸಿದಂತೆ "ಹುಣಸೂರು ತಾಲ್ಲೂಕು ಗಾಣಿಗರ ಸಂಘ (ರಿ)" ಶಿವಜ್ಯೋತಿನಗರ, ಶಂಕರಮಠದ ರಸ್ತೆ, ಹುಣಸೂರು–571 105 ಇದರ ವಿರುದ್ಧ ಪ್ರಾಪ್ತವಾದ ದೂರು ಅರ್ಜಿಯನ್ನು ವಿಚಾರಣೆ ನಡೆಸಿ ವರದಿ ನೀಡಲು ಹುಣಸೂರು ತಾಲ್ಲೂಕಿನ ಸಹಕಾರ ಅಭಿವೃದ್ಧಿ ಅಧಿಕಾರಿಗೆ ಕಳುಹಿಸಲಾಗಿದ್ದು ವಿಚಾರಣೆಗೆ ಸಂಘದವರು ಸ್ಪಂದಿಸದ ಕಾರಣ ಆರೋಪಗಳು ಸಾಬೀತಾಗಿವೆ ಎಂದು ಪರಿಗಣಿಸಿ ಆಡಳಿತ ಸಮಿತಿಯನ್ನು ರದ್ದುಗೊಳಿಸಿ ಅಧಿನಿಯಮದ ಪ್ರಕರಣ 2/ಎ ರೀತ್ಯಾ ಆಡಳಿತಗಾರರನ್ನು ನೇಮಿಸುವಂತೆ ನೋಂದಣಾಧಿಕಾರಿಗಳು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.